


ಉನ್ನತ ಆಲೋಚನೆಗಳಿಂದ, ಅತ್ಯುನ್ನತ ಆದರ್ಶಗಳಿಂದ ನಿಮ್ಮ ಮೆದುಳನ್ನು ತುಂಬಿ ; ಅವುಗಳನ್ನು ಹಗಲಿರುಳೂ ನಿಮ್ಮ ಮುಂದಿರಿಸಿ ಕೊಳ್ಳಿ. ಇದರಿಂದ ಮಹತ್ಕಾರ್ಯ ಉದ್ಭವಿಸುತ್ತದೆ.

ಪ್ರತಿಯೊಬ್ಬರೂ ಇತರರ ಭಾವವನ್ನು ಗ್ರಹಿಸಬೇಕು. ಆದರೂ ತನ್ನ ವೈಯಕ್ತಿಕತೆಯನ್ನು ಉಳಿಸಿ ಕೊಳ್ಳಬೇಕು ಮತ್ತು ತನ್ನ ಬೆಳವಣಿಗೆಯ ನಿಯಮಕ್ಕೆ ಅನುಸಾರವಾಗಿ ಬೆಳೆಯಬೇಕು.

ನೀವು ನಿದ್ರಿಸುತ್ತಿರುವಾಗಲೂ ಕೂಡ ವಿವೇಕದ ಖಡ್ಗವನ್ನು ನಿಮ್ಮ ತಲೆಯ ಪಕ್ಕದಲ್ಲಿ ಇಟ್ಟುಕೊಂಡಿರಿ; ಕನಸಿನಲ್ಲಿಯೂ ಕೂಡ ಪ್ರಾಪಂಚಿಕ ಆಸೆ ನಿಮ್ಮ ಸಮೀಪಕ್ಕೆ ಸುಳಿಯದಿರಲಿ.

ಸ್ವಾಮಿ ವಿವೇಕಾನಂದ

# ಪ್ರಾರ್ಥನೆ

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತ -
ಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ |
ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ
ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ ||

ಕಠೋಪನಿಷತ್ ೧.೨.೨

ಆತ್ಮೋನ್ನತಿಯ ಮಾರ್ಗ (ಶ್ರೇಯಸ್) ಮತ್ತು ಪ್ರಾಪಂಚಿಕ ಸುಖಪ್ರಾಪ್ತಿಯ ಮಾರ್ಗ(ಪ್ರೇಯಸ್) ಇವೆರಡೂ ಮಾನವನ ಮುಂದೆ ತೆರೆದಿವೆ. ವಿವೇಕ ಬುದ್ಧಿಯುಳ್ಳವನು ಇವೆರಡನ್ನೂ ಚೆನ್ನಾಗಿ ವಿಶ್ಲೇಷಿಸಿ ನೋಡುತ್ತಾನೆ. ಆತ ಪ್ರೇಯಸ್ಸನ್ನು ಬಿಟ್ಟು ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವಿವೇಕಿಯಾದವನು ಯೋಗಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ.

ಯೋ ದೇವಾನಾಂ ಪ್ರಥಮಂ ಪುರಸ್ತಾದ್
ವಿಶ್ವಾಧಿಕೋ ರುದ್ರೋ ಮಹರ್ಷಿಃ |
ಹಿರಣ್ಯಗರ್ಭಂ ಪಶ್ಯತ ಜಾಯಮಾನಂ
ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು ||

ಮಹಾನಾರಾಯಣೋಪನಿಷತ್ ೧೦.೧೯

ಸರ್ವಶ್ರೇಷ್ಠನೂ, ವೇದದ ಮೂಲಕ ಪ್ರಕಾಶಿತನಾದವನೂ ಪರಮದ್ರಷ್ಟನೂ ಎಲ್ಲಕ್ಕೂ ಮೊದಲು ಹುಟ್ಟಿದ ಹಿರಣ್ಯಗರ್ಭನನ್ನು ನೋಡುವವನೂ ಆದ ದೇವದೇವನು ನಮ್ಮನ್ನು ಶ್ರೇಯಸ್ಕರವಾದ ಸ್ಮೃತಿಯೊಂದಿಗೆ ಒಂದುಗೂಡಿಸಲಿ.

## ಪತ್ರಿಕೆಯ ಧ್ಯೇಯ

(ರಾಮಕೃಷ್ಣ ಮಹಾಸಂಘದ ವಿವಿಧ ಪತ್ರಿಕೆಗಳ ಸ್ಥಾಪನೆಯ ಸಮಯದಲ್ಲಿ ಸ್ವಾಮೀಜಿಯವರು ನೀಡಿದ ಮಾರ್ಗದರ್ಶನ ಸೂತ್ರ)

ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು. ಅಲ್ಲ, ಇಲ್ಲ ಎಂಬ ನಿಷೇಧಾತ್ಮಕ ಭಾವನೆಗಳು ಮನುಷ್ಯನನ್ನು ನಿರ್ಜೀವ ಮಾಡಿಬಿಡುತ್ತವೆ.... ನಿಂದೆಯ ನುಡಿಗಳಿಗೆ ಅಲ್ಲಿ ಅವಕಾಶವೇ ಇರಕೂಡದು ... ವೇದ ವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು. ಸದಾಚಾರ, ಸದ್ವ್ಯವಹಾರ, ಶಿಕ್ಷಣ ಇವುಗಳನ್ನು ಕುರಿತ ವಿಚಾರಗಳನ್ನು ಜನರಿಗೆ ನೀಡಿ ಕೆಳವರ್ಗದವರೂ ಮೇಲ್ಮಟ್ಟಕ್ಕೆ ಏರುವಂತೆ ಮಾಡಬೇಕು. ಪತ್ರಿಕೆಯಲ್ಲಿ ಇದನ್ನೆಲ್ಲ ಬರೆದು ಯುವಕರು ಮುದುಕರು, ಪುರುಷರು ಮಹಿಳೆಯರು ಎಲ್ಲರನ್ನೂ ಜಾಗ್ರತಗೊಳಿಸಿ.

ಸ್ವಾಮಿ ವಿವೇಕಾನಂದ